ಇ) ಅಭಿವೃದ್ಧಿ ಶುಲ್ಕವನ್ನು ಪಾವತಿಸಿಕೊಂಡು ಈ ಶುಲ್ಕದಿಂದ ರೆವಿನ್ಯೂ ಬಡಾವಣೆಗಳಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಈ) ಈ ಬಡಾವಣೆಗಳು ಸುಮಾರು 15 ವರ್ಷಗಳಿಂದ ಇರುತ್ತದೆ. ಸರ್ಕಾರವು ಆದೇಶ ಸಂಖ್ಯೆ ನಲಾಇ 360 ಬಿಎಸ್ಇ 97 ದಿನಾಂಕ 24-4-98ರ ಆದೇಶದಲ್ಲಿ ಈ ಕೆಳಕಂಡ ಅಧಿಕಾರಿಗಳನ್ನು ಮೈಸೂರಿನಲ್ಲಿ ಸಕ್ಷಮ ಪ್ರಾಧಿಕಾರಗಳನ್ನಾಗಿ ನೇಮಿಸಿದೆ.

1) ಆಯುಕ್ತರು, ಮೈಸೂರು ನಗರ ಪಾಲಿಕೆ

2) ಆಯುಕ್ತರು, ಮೂಡಾ

3) ವಿಭಾಗಾಧಿಕಾರಿಗಳ ಗೆಜೆಟೆಡ್ ಅಸಿಸ್ಟೆಂಟ್

4) ಜಿಲ್ಲಾ ನೋಂದಣಾಧಿಕಾರಿ

1995ರಲ್ಲಿ ಮೈಸೂರು ಮಹಾನಗರಪಾಲಿಕೆಯು ಸ್ವೀಕರಿಸಿರುವ ಅರ್ಜಿಗಳನ್ನು ವಿಂಗಡಿಸಲು ಹಾಗೂ ಕಾರ್ಯವ್ಯಾಪ್ತಿಯ ಸಕ್ಷಮ ಪ್ರಾಧಿಕಾರಿಗಳಿಗೆ ಕಳುಹಿಸಲು ಕ್ರಮ ಕೈಗೊಳ್ಳಲಾಗಿದೆ.

ಉ) ಈ ತನಕ ಯಾವ ಬಡಾವಣೆಯನ್ನು ಸಕ್ರಮಗೊಳಿಸಿಲ್ಲ.

ರೋಣ ತಾಲ್ಲೂಕಿನ ಮುಶಿಗೇರಿ ಗ್ರಾಮದಲ್ಲಿ ಕೈಮಗ್ಗ ನೇಕಾರಿಕ ಕೇಂದ್ರ.

3373 (4151) ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್ (ರೋಣ) :— ಮಾನ್ಯ ರೇಷ್ಮೆ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗದಗ ಜಿಲ್ಲೆ ರೋಣ ತಾಲ್ಲೂಕಿನ ಮುಶಿಗೇರಿ ಗ್ರಾಮದಲ್ಲಿ ಕೈಮಗ್ಗ ನೇಕಾರ ತರಬೇತಿ ಕೇಂದ್ರಕ್ಕೆ ಲಕ್ಷಾಂತರ ರೂ.ಗಳ ವೆಚ್ಚದಲ್ಲಿ ಸರ್ಕಾರ ಕಟ್ಟಡ ಸಾಧನ ಸಾಮಗ್ರಿ ಒದಗಿಸದೇ ಕೆಲವು ವರ್ಷಗಳಿಂದ ಕೇಂದ್ರ ಸ್ಥಗಿತಗೊಳಿಸಲಾಗಿದ್ದು ಕೇಂದ್ರ ಆರಂಭಕ್ಕೆ ಇರುವ ತೊಂದರೆಗಳೇನು? ಕೇಂದ್ರ ಪುನರಾರಂಭಿಸಲು ಕೈಗೊಳ್ಳಲು ಉದ್ದೇಶಿಸಿರುವ ಅಗತ್ಯ ಕ್ರಮಗಳಾವುವು?

ಆ) ಕೈಮಗ್ಗ ನೇಕಾರ ಕಾರ್ಮಿಕರ ಅಭಿವೃದ್ಧಿಗೆ ಸರ್ಕಾರ ಹಾಕಿಕೊಂಡ ನೂತನ ಕಾರ್ಯಕ್ರಮಗಳಾವುವು?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :—

ಅ) ಗದಗ ಜಿಲ್ಲೆ ರೋಣ ತಾಲ್ಲೂಕಿನ ಮುಶಿಗೇರಿ ಗ್ರಾಮದಲ್ಲಿ ಕೈಮಗ್ಗ ನೇಕಾರ ತರಬೇತಿ ಕೇಂದ್ರದಲ್ಲಿ ಈಗಾಗಲೇ ಕೇಂದ್ರ ಸರ್ಕಾರದ ಯೋಜನೆಯಾದ ಗ್ರಾಮೀಣ ಮಹಿಳೆಯರಿಗೆ ಉದ್ಯೋಗ ಭರವಸೆ ಮತ್ತು ತರಬೇತಿ ಯೋಜನೆಯಡಿಯಲ್ಲಿ 1997-98ನೇ

ಸಾಲಿನಲ್ಲಿ 20 ಮಹಿಳೆಯರಿಗೆ ನೇಯ್ಗೆ ತರಬೇತಿ ನೀಡಲಾಗಿದೆ. ಈ ಯೋಜನೆಯು ಮುಕ್ತಾಯವಾಗಿರುವುದರಿಂದ ಮುಂದಿನ ತರಬೇತಿಗೆ ಅವಕಾಶವಿರುವುದಿಲ್ಲ. ಆದರೆ ತರಬೇತಿ ಹೊಂದಿದ 20 ಅಭ್ಯರ್ಥಿಗಳಿಗೆ ಅದೇ ಕೇಂದ್ರದಲ್ಲಿ ನೇಯ್ಗೆ ವೃತ್ತಿ ಮುಂದುವರಿಸಲು ಬೇಕಾದ ಅಗತ್ಯ ಕ್ರಮಗಳನ್ನು ಕೈಗೊಂಡಿದ್ದು, ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ದುಡಿಮೆ ಬಂಡವಾಳದ ಬಗ್ಗೆ ವ್ಯವಹರಿಸಲಾಗಿದೆ. ಈ ಹಣ ಬಿಡುಗಡೆಯಾದ ತಕ್ಷಣ ಈ ಫಲಾನುಭವಿಗಳನ್ನು ನೇಯ್ಗೆ ವಡತ್ತಿಯಲ್ಲಿ ಈ ಕೇಂದ್ರದಲ್ಲಿ ತೊಡಗಿಸಲಾಗುವುದು.

ಅ) ಕರ್ನಾಟಕ ಕ್ಷೇಮಗ್ಗ ಅಭಿವೃದ್ಧಿ ನಿಗಮವು ನೇಕಾರರ ಅಭಿವೃದ್ಧಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ.

1. ಸಹಕಾರ ಕ್ಷೇತ್ರದಿಂದ ಹೊರಗುಳಿದ ಹಾಗು ಮಾಸ್ಟರ್ ವೀವರ್ಸ್‌ಗಳ ಬಳಿಯಲಿರುವ ಬಡ ನೇಕಾರರನ್ನು ಮುಕ್ತಗೊಳಿಸಿ, ನಿಗಮದ ವ್ಯಾಪ್ತಿಯಲ್ಲಿ ಅಳವಡಿಸಿಕೊಂಡು ಉದ್ಯೋಗ ಕಲ್ಪಿಸುವುದು.

2. ಅಳವಡಿಸಿಕೊಂಡ ನೇಕಾರರಿಗೆ ಕಚ್ಚಾಮಾಲು, ಮಗ್ಗ ಮತ್ತು ಸಾಮಗ್ರಿ, ನೇಯ್ದ ಬಟ್ಟೆಗಳಿಗೆ ಯೋಗ್ಯ ಪರಿವರ್ತನಾ ಶುಲ್ಕ ನೀಡುವುದು ಹಾಗೂ ನೇಯ್ದ ಬಟ್ಟೆಗಳಿಗೆ ಮಾರುಕಟ್ಟೆ ಒದಗಿಸುವುದು.

3. ನೇಕಾರರ ಅಭಿವೃದ್ಧಿ ಹಾಗೂ ಕಲ್ಯಾಣಕ್ಕಾಗಿ ಸರ್ಕಾರದ ಅನೇಕ ಯೋಜನೆಗಳಾದ (ಅ) ಮಿತವ್ಯಯ ನಿಧಿ, (ಆ) ಗುಂಪು ವಿಮಾ ಯೋಜನೆ, ಇ) ಆಶಾಜ್ಯೋತಿ ಯೋಜನೆ. (ಈ) ಆರೋಗ್ಯ ಬುತ್ತಿ ಯೋಜನೆ (ಉ) ಕೇಂದ್ರ ಪುರಸ್ಕೃತ ಕಾರ್ಯಾಗಾರ ಮತ್ತು ವಸತಿ ಹಾಗೂ ಕಾರ್ಯಾಗಾರ ಯೋಜನೆಗಳನ್ನು ಹಾಗೂ ನೇಕಾರರ ನೇಯ್ಗೆ ಕೌಶಲ್ಯ ಹೆಚ್ಚಿಸಲು ಅನೇಕ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ವಿಶ್ವ ಯೋಜನೆಯ ಮೂಲಕ ಒದಗಿಸಲಾಗುತ್ತಿದೆ.

ಗಂಗಾ ಕಲ್ಯಾಣ ಯೋಜನೆಯಲ್ಲಿ ಬೆಳಗಾವಿ ಜಿಲ್ಲೆಗೆ ಮಂಜೂರಾತಿ ಯೋಜನೆಗಳು.

3374(4108) **ಶ್ರೀ ಹುಕ್ಕೇರಿ ಪ್ರಕಾಶ್ ಬಾಬಣ್ಣಾ (ಸದಲಗ) :—** ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ 3 ವರ್ಷಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನರ ಜಮೀನುಗಳಿಗೆ ಏತ ನೀರಾವರಿ ಯೋಜನೆ ಅಡಿಯಲ್ಲಿ (ಗಂಗಾ ಕಲ್ಯಾಣ ಯೋಜನೆ) ಬೆಳಗಾವಿ ಜಿಲ್ಲೆಗೆ ಮಂಜೂರಾದ ಒಟ್ಟು ಯೋಜನೆಗಳೆಷ್ಟು ತಾಲ್ಲೂಕುವಾರು ಹಾಗೂ ಸದಲಗಾ ಕ್ಷೇತ್ರವಾರು ವಿವರ ನೀಡುವುದು.